ನಾರ :— ಅರ್ಥ, ಅವ್ನೂ....ಮನೇಲೀ........ ಇಲ್ಲಾಂತೆ....ಅರ್ಥ. ತಾತ್ಪರ್ಯ, ತಂದೆ ತಾಯಿ ಮಾತಿಗೆ ಬೆಲೆ ಕೊಡ್ದೆ ಓಡ್ಹೋದ ಅಂತ.

ಪಾರ್ವತಿ :— ಎಲ್ಲಾದ್ರೂ ಉಂಟೇನಂದ್ರೆ. ನಾನಷ್ಟ್ಹೇಳಿದ್ದೇನೆ. ರಾಮೂ !

ನಾರ :— ಯಾಕೆ, ಯಾಕ್ಸುಮ್ನೇ ಕೂಗ್ಕೊಳ್ತೀಯೇ? ಅವ್ನಿಲ್ಲ. ಅದ್ಯಾಕಾದ್ರೂ ಈಗಿನ್ಕಾಲದ ಹುಡುಗ್ರು ಮದ್ವೆ ಅಂದ್ರೆ ಹೀಗ್ಹೆದರ್ಕೊಂಡೋಡ್ಹೋಗ್ತಾರೋ ನಾನ್ಕಾರೆ ಕಾಣೆ. .... ಲೇ, ನಮಗ್ಯಾವಾಗ್ಲೇ ಮದ್ವೆ ಆದ್ದು ?

ಪಾರ್ವತಿ :— ಸರಿ. ನಿಮ್ಗಾಯ್ತು, ಅನ್ಮೃಹೂರ್ತ ಮದ್ವೆ ಎರ್ಡೂ ಒಟ್ಗೇ. ಈಗ್ಲೂ ಹಾಗೇ ಆಗೂಂದ್ರಾಗುತ್ತೇನೂ ?

ನಾರ :— ಛೆ ಛೆ, ಯಾಕಾಗ್ಬೇಕು? ಪ್ರಸ್ಥ್ಪೂರ್ತೀನೂ ಮದ್ವೇನೂ ಒಟ್ಗೇ ಮಾಡ್ಕೊಂಡ್ಬಿಡ್ಲಿ, ಖರ್ಚಾದ್ರೂ ಉಳಿಯುತ್ತೆ. ನೋಡೇ, ಮುಖ್ಯವಾಗೀ, ನಿನಗೆ ಬುದ್ಧಿ ಇಲ್ಲ. "ಅಮರ ಓದ್ಲೀ ಅವ್ನು" ಅಂತ್ಕಾನಂದೆ. "ಅಮಲ್ದಾರ್ರಾಗ್ಲಿ ಅವ್ನು" ಅಂತ್ಕೀನಂದಿ. ಇಗೋ ಅದಕ್ಕಿದೇ ಫಲ. ಜೊಟ್ಟೆಗಾರರ್ಹಾಗೆ crop ಬಿಟ್ಕೊಂಡು, ಸದಾ ಕನಡಿ ಮುಂದೆ ಕೂತ್ಕೊಂಡು ಹೆಂಗಸಿನ್ಹಾಗೆ ಬೈತಲೆ ತಿದ್ಕೊಳ್ತಾ,–ಹೇಳಿದ್ಮಾತು ಕೇಳೋಣಿಲ್ಲ, ಮಾಡೋಣಿಲ್ಲ—ಏನೋ ತಾನೇ ಘೋಡ್ ಬೃಹಸ್ಪತಿಹಾಗೆ, ಪ್ರತಿಬಂದಕಸ್ನಾ ಪ್ರಶ್ನೆ ಹಾಕೋದು, ಇಂಗ್ಲೀಷ್ನಲ್ಲಿ !

ಪಾರ್ವತಿ :— ನೀವು ಇಂಗ್ಲೀಷ್ನಲ್ಲಿ ಧಾನ್ಯಾಗ್ರೀಗಾಡೋರಂತೆ, ಈಗ ಅವರ್ಬಂದ್ಬಿಡ್ತಾರಲ್ಲ, ಏನ್ಮಾಡೋದೂಂದ್ರೇ ?

ನಾರ :— ಮಾಡೋದೇನ್ಹೇಳ್ಕೋ, ಇಂಗ್ಲಿಷ್ ಮಗ, ಕನ್ನಡ್ನೋರ್ಮಾತು ಕಿವೀಗ್ಹಾಕ್ಕೊಳ್ದೆ ಓಡ್ಹೋದಾನಂತ.

(ಜೋಯಿಸ ಹೊರಬಾಗಿಲಲ್ಲಿ "ನಾರ್ಣಪ್ನೋರೇ" ಎಂದು ಕೂಗಲು)

ಪಾರ್ವತಿ :— ಅಗೋ ಜೋಯಿಸ್ರೂ ಬಂದೇಬಿಟ್ರು.

ಜೋಯಿಸ :— (ಪ್ರವೇಶಿಸಿ) ಏನ್ ನಾರ್ಣಪ್ನೋರೇ, ಎಲ್ಲಾ ಸಿದ್ಧತಾನೇ ? ಇನ್ನೇನೀಗ ಬಂದ್ಬಿಡ್ತಾರವ್ರು. ರಾಮು ಎಲ್ಲಿ ?

